ಸಂಖ್ಯೆ. ಎ.ಡಿ.ಎಂ.I(ಎ) /22/ 2003

ನಗರ ಸಿವಿಲ್ ನ್ಯಾಯಾಲಯದ ಕಾರ್ಯಾಲಯ,
ಬೆಂಗಳೂರು

ದಿನಾಂಕ : 19-5-2003

# ನೇಮಕಾತಿ ಪ್ರಕಟಣೆ

ಬೆಂಗಳೂರು, ನಗರ ಸಿವಿಲ್ ನ್ಯಾಯಾಲಯ ಘಟಕದಲ್ಲಿ ಖಾಲಿ ಇರುವ ಈ ಕೆಳಕಂಡ ಹುದ್ದೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಕೆಳಕಂಡ ಷರತ್ತುಗಳನ್ನು ಪೂರೈಸಿದ ಅರ್ಹ ಅಭ್ಯರ್ಥಿಗಳು ದಿನಾಂಕ 30.6.2003 ರ ಸಂಜೆ 4 ಗಂಟೆಯೊಳಗೆ ಅರ್ಜಿಗಳನ್ನು ಸಲ್ಲಿಸಲು ಸೂಚಿಸಿದೆ.

1. ಖಾಲಿ ಹುದ್ದೆಯ ವಿವರಗಳು :

| ಕ್ರಮ ಸಂಖ್ಯೆ | ಹುದ್ದೆಯ ಹೆಸರು | ಖಾಲಿ ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ |
|---|---|---|---|
| 1 | ಚಾಲಕರು | 2 | 3000-75-3450-100-3850 |
| 2 | ಜವಾನರುಗಳು | 78 | 2500-50-2700-75-3450-100-3850 |
| 3 | ಜಾಡಮಾಲಿಗಳು (ಸ್ಕ್ಯಾವೆಂಜರ್ಸ್) | 2 | 2500-50-2700-75-3450-100-3850 |
| 4 | ಕ್ಲೀನರ್‌ಗಳು (ವಾಹನಗಳಿಗೆ) | 2 | 2500-50-2700-75-3450-100-3850 |

1. ಖಾಲಿ ಹುದ್ದೆಗಳ ವರ್ಗೀಕರಣ :

ಸರ್ಕಾರಿ ಆದೇಶ ಸಂಖ್ಯೆ ಡಿಪಿಎಆರ್ 8 ಸಹಿಮ 95 ದಿನಾಂಕ: 20-6-95 ಮತ್ತು ಸರ್ಕಾರಿ ಆದೇಶ ಸಂಖ್ಯೆ ಸಿ ಆಸು ಇ 97 ಸೆನಿನಿ 2002 ದಿನಾಂಕ 22-11-2002ರ ಪ್ರಕಾರ ಕಾದಿರಿಸಿದ ಹುದ್ದೆಗಳ ವರ್ಗೀಕರಣ

## ಚಾಲಕ ಹುದ್ದೆಗಳು

| | ಸಾಮಾನ್ಯ ಅರ್ಹತೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪ್ರವರ್ಗ – I | ಪ್ರವರ್ಗ – II ಎ | ಪ್ರವರ್ಗ–II ಬಿ | ಪ್ರವರ್ಗ–III ಎ | ಪ್ರವರ್ಗ–III ಬಿ | ಒಟ್ಟು |
|---|---|---|---|---|---|---|---|---|---|
| 1 ಗ್ರಾಮೀಣ ಅಭ್ಯರ್ಥಿ | 1 | | | | | | | | 1 |
| 2 ಇತರೇ ಅಭ್ಯರ್ಥಿ | | | | 1 | | | | | 1 |
| ಒಟ್ಟು | **1** | | | **1** | | | | | **2** |

## ಜವಾನ ಹುದ್ದೆಗಳು

| | ಸಾಮಾನ್ಯ ಅರ್ಹತೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪ್ರವರ್ಗ - I | ಪ್ರವರ್ಗ-II ಎ | ಪ್ರವರ್ಗ-II ಬಿ | ಪ್ರವರ್ಗ-III ಎ | ಪ್ರವರ್ಗ-III ಬಿ | ಒಟ್ಟು |
|---|---|---|---|---|---|---|---|---|---|
| 1 ಮಹಿಳಾ ಅಭ್ಯರ್ಥಿ | 12 | 3 | 1 | 1 | 3 | 1 | 1 | 2 | 24 |
| 2 ಮಾಜಿ ಸೈನಿಕರು | 4 | 1 | | | 1 | | | | 6 |
| 3 ಅಂಗವಿಕಲ ಅಭ್ಯರ್ಥಿ | 2 | | | | | | | | 2 |
| 4 ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ | 2 | 1 | | | | | | | 3 |
| 5 ಗ್ರಾಮೀಣ ಅಭ್ಯರ್ಥಿ | 9 | 4 | 1 | 1 | 4 | 1 | 1 | 1 | 22 |
| 6 ಕನ್ನಡ ಮಾಧ್ಯಮ ಅಭ್ಯರ್ಥಿ | 2 | 1 | | | 1 | | | | 4 |
| 7 ಇತರೇ ಅಭ್ಯರ್ಥಿ | 8 | 2 | 1 | 1 | 2 | 1 | 1 | 1 | 17 |
| ಒಟ್ಟು | **39** | **12** | **3** | **3** | **11** | **3** | **3** | **4** | **78** |

## ಸ್ಕ್ಯಾವೆಂಜರ್ಸ್ (ಜಾಡುಮಾಲಿಗಳು) ಹುದ್ದೆಗಳು

| | ಸಾಮಾನ್ಯ ಅರ್ಹತೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪ್ರವರ್ಗ - I | ಪ್ರವರ್ಗ-II ಎ | ಪ್ರವರ್ಗ-II ಬಿ | ಪ್ರವರ್ಗ-III ಎ | ಪ್ರವರ್ಗ-III ಬಿ | ಒಟ್ಟು |
|---|---|---|---|---|---|---|---|---|---|
| 1 ಇತರೇ ಅಭ್ಯರ್ಥಿ | 1 | 1 | | | | | | | 2 |

## ಕ್ಲೀನರ್ಸ್ ಹುದ್ದೆಗಳು

| | ಸಾಮಾನ್ಯ ಅರ್ಹತೆ | ಪರಿಶಿಷ್ಟ ಜಾತಿ | ಪರಿಶಿಷ್ಟ ಪಂಗಡ | ಪ್ರವರ್ಗ - I | ಪ್ರವರ್ಗ-II ಎ | ಪ್ರವರ್ಗ-II ಬಿ | ಪ್ರವರ್ಗ-III ಎ | ಪ್ರವರ್ಗ-III ಬಿ | ಒಟ್ಟು |
|---|---|---|---|---|---|---|---|---|---|
| 1 ಮಹಿಳಾ ಅಭ್ಯರ್ಥಿ | | 1 | | | | | | | 1 |
| 2 ಇತರೇ ಅಭ್ಯರ್ಥಿ | | | | 1 | | | | | 1 |
| ಒಟ್ಟು | | **1** | | **1** | | | | | **2** |

| | | |
|---|---|---|
| 1 | ನೇಮಕಾತಿ ವಿಧಾನ | ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಯಿಂದ ನೇರ ನೇಮಕಾತಿ) ನಿಯಮಗಳು, 2001ರ 9ನೇ ನಿಯಮದ ಪ್ರಕಾರ ಅಭ್ಯರ್ಥಿಗಳ ಅರ್ಹತೆಯ ಆಧಾರದ ಮೇಲೆ ಇದ್ದು ಯಾವುದೇ ಸಂದರ್ಶನವಿರುವುದಿಲ್ಲ. |
| 2 | ಅರ್ಜಿಗಳನ್ನು ಕಳುಹಿಸಬೇಕಾದ ವಿಳಾಸ | ವಿಲೇಖನಾಧಿಕಾರಿಗಳು,<br>ನಗರ ಸಿವಿಲ್ ನ್ಯಾಯಾಲಯ,<br>ಬೆಂಗಳೂರು. |
| 3 | ಅರ್ಜಿಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ | **ದಿನಾಂಕ 30.6.2003 ರಂದು ಸಂಜೆ 4 ಗಂಟೆ** |
| 4 | ವಿದ್ಯಾರ್ಹತೆ<br>ಅ) ಚಾಲಕ ಹುದ್ದೆಗೆ ಮಾತ್ರ | i) ನವೀಕೃತಗೊಂಡ ಭಾರೀ ವಾಹನ ಚಾಲನೆಯ ಪರವಾನಿಗೆ ಪಡೆದಿರಬೇಕು<br>ii) 7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. |
| | ಆ) ಜವಾನ ಹುದ್ದೆಗೆ ಜಾಡಮಾಲಿಗಳು ಮತ್ತು ಕ್ಲೀನರ್ ಹುದ್ದೆಗೆ | 7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. ಹಾಗೂ ಕನ್ನಡ ಒಂದು ವಿಷಯವಾಗಿರಬೇಕು. |
| 5 | ವಯೋಮಿತಿ | ಅಭ್ಯರ್ಥಿಯು 18 ವರ್ಷ ಪೂರೈಸಿರಬೇಕು ಮತ್ತು ಗರಿಷ್ಠ ವಯಸ್ಸು ಕೆಳಕಂಡಂತಿದೆ.<br>1 ಅನುಸೂಚಿತ ಜಾತಿ ಮತ್ತು ಪಂಗಡ ಹಾಗೂ ಪ್ರವರ್ಗ- I ರ ಅಭ್ಯರ್ಥಿಗಳಿಗೆ 38 ವರ್ಷ ಮೀರಿರಬಾರದು.<br>2 ಗುಂಪು- II- ಎ, II- ಬಿ III-ಎ III-ಬಿ ಅಭ್ಯರ್ಥಿಗಳು 36 ವರ್ಷ ಮೀರಿರಬಾರದು.<br>3 ಸಾಮಾನ್ಯ ಅಭ್ಯರ್ಥಿಗಳು 33 ವರ್ಷ ಮೀರಿರಬಾರದು.<br>4 ವಯಸ್ಸಿನ ಮಿತಿಯನ್ನು ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ / ಕೇಂದ್ರ ಸರ್ಕಾರಿ ನೌಕರರು / ಮಾಜಿಸೈನಿಕರು / ಅಂಗವಿಕಲ ಅಭ್ಯರ್ಥಿಗಳು / ಹಾಗೂ ವಿಧವೆಯರ ಬಗ್ಗೆ ಕೆ.ಸಿ.ಎಸ್. (ಸಾಮಾನ್ಯ ನೇಮಕಾತಿ ) ನಿಯಮಗಳು 1977ರ ಪ್ರಕಾರ ಸಡಿಲಿಕೆಯನ್ನು ಕೊಡಲಾಗುವುದು. |

(ಸೂಚನೆ : 1 ಅಭ್ಯರ್ಥಿಯು ಕ್ರಾಸ್ ಮಾಡಿದ 5 ರೂಪಾಯಿಗಳ ಭಾರತೀಯ ಪೋಸ್ಟಲ್ ಆರ್ಡರ್ ಅನ್ನು "ವಿಲೇಖನಾಧಿಕಾರಿಗಳು, ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು ." ರವರ ಹೆಸರಿಗೆ ಪಡೆದು ಲಗತ್ತಿಸಬೇಕು. ಪೋಸ್ಟಲ್ ಆರ್ಡರನ್ನು ಈ ನೇಮಕಾತಿ ಪ್ರಕಟಣಾ ದಿನಾಂಕದಿಂದ 15 ದಿವಸಗಳಿಗಿಂತ ಮುಂಚಿತವಾಗಿ ಪಡೆದಿರಬಾರದು. ಅನುಸೂಚಿತ ಜಾತಿ ಪಂಗಡ ಮತ್ತು ಪ್ರವರ್ಗ-1ರ ಅಭ್ಯರ್ಥಿಗಳಿಗೆ ಶುಲ್ಕದಿಂದ ವಿನಾಯಿತಿ ಇರುತ್ತದೆ.

2 ಏಳನೇ ತರಗತಿ ಅಂಕ ಪಟ್ಟಿ ಲಗತ್ತಿಸದ ಹಾಗೂ ಅಪೂರ್ಣ ಅರ್ಜಿಗಳನ್ನು ಯಾವ ವ್ಯವಹಾರಕ್ಕೂ ಅವಕಾಶ ಕೊಡದೆ ತಿರಸ್ಕರಿಸಲಾಗುವುದು.

3 ಖಾಲಿ ಹುದ್ದೆಗಳ ಸಂಖ್ಯೆ ಬದಲಾವಣೆಗೊಳ್ಳುವ ಸಂಭವವಿದೆ.

4. ನೇಮಕಾತಿಯು ತಾತ್ಕಾಲಿಕವಾಗಿದ್ದು 2 ವರ್ಷದ ಪರೀಕ್ಷಾರ್ಥ ಅವಧಿಯನ್ನು ಪೂರ್ಣಗೊಳಿಸಬೇಕಾಗಿರುತ್ತೆ)

5 ಅಭ್ಯರ್ಥಿಯು ಈಗಾಗಲೇ ಸರ್ಕಾರಿ ನೌಕರಿಯಲ್ಲಿದ್ದರೆ ಅರ್ಜಿಗಳನ್ನು ನೇಮಕಾತಿ ಅಧಿಕಾರಿಗಳ ಮೂಲಕವೇ ಕಳುಹಿಸಬೇಕು.

6 ಕರ್ನಾಟಕ ನಾಗರೀಕ ಸೇವಾ ಸಾಮಾನ್ಯ ನೇಮಕಾತಿ ನಿಯಮಗಳು 1977 ರ ಪ್ರಕಾರ ಅಥವಾ ಇನ್ಯಾವುದೇ ನಿಯಮಗಳ ಪ್ರಕಾರ ಅಭ್ಯರ್ಥಿಯು ಅನರ್ಹನಾಗಿದ್ದಲ್ಲಿ ನೇಮಕಾತಿಗೆ ಅರ್ಹರಾಗುವುದಿಲ್ಲ.

ಅಭ್ಯರ್ಥಿಗಳು ಅರ್ಜಿಯೊಂದಿಗೆ ಕೆಳಕಂಡ ದಾಖಲಾತಿಗಳ ದೃಢೀಕೃತ ನಕಲನ್ನು ಸಲ್ಲಿಸತಕ್ಕದ್ದು, ತಪ್ಪಿದಲ್ಲಿ ಯಾವ ಸೂಚನೆಯನ್ನು ಕೊಡದೆ ಅರ್ಜಿಗಳನ್ನು **ತಿರಸ್ಕರಿಸಲಾಗುವುದು.**

1 ವಯಸ್ಸಿನ ಬಗ್ಗೆ ದಾಖಲಾತಿ ಅಂದರೆ ಹುಟ್ಟಿದ ದಿನದ ದೃಢೀಕರಣ ಪತ್ರ ಅಥವಾ ಶಾಲಾ ವರ್ಗಾವಣೆ ಪತ್ರ, ಇತ್ಯಾದಿ.

2 **ಏಳನೇ ತರಗತಿ ಉತ್ತೀರ್ಣವಾದ ಬಗ್ಗೆ ಅಂಕಪಟ್ಟಿಯ ನಕಲನ್ನು ಮಾತ್ರ ಲಗತ್ತಿಸತಕ್ಕದ್ದು**

3 ಈಗಾಗಲೇ ಸೇವೆಯಲ್ಲಿರುವವರು ಸೇವಾ ದೃಢೀಕರಣ ಪತ್ರ.

4 ಪ್ರವರ್ಗ-I ಕ್ಕೆ ಸೇರಿದ ಅಭ್ಯರ್ಥಿಗಳು ನಿಗದಿತ ನಮೂನೆ 'ಇ' ಪ್ರಕಾರ ಪಡೆದ ಜಾತಿ ಪ್ರಮಾಣ ಪತ್ರ.

6 ಪ್ರವರ್ಗ II-ಎ, II-ಬಿ, III-ಎ ಮತ್ತು III-ಬಿ ವರ್ಗಕ್ಕೆ ಸೇರಿದ ಅಭ್ಯರ್ಥಿಗಳು ಸರ್ಕಾರಿ ಅಧಿಸೂಚನೆ ಸಂಖ್ಯೆ ಎಸ್.ಡಬ್ಲ್ಯೂ.ಡಿ. 126 ಬಿಸಿಎ 2002 ದಿ. 13-2-2003 ರಲ್ಲಿ ನಿಗಧೀಕರಿಸಿದ್ದ ಫಾರಂ 'ಎಫ್' ಪ್ರಕಾರ ಸಂಬಂಧಿತ ತಹಸೀಲ್ದಾರ್‌ರವರು ನೀಡಿರುವ ಜಾತಿ ಮತ್ತು ಆದಾಯ ದೃಢೀಕರಣ ಪತ್ರ.

7 ಗ್ರಾಮೀಣ ಅಭ್ಯರ್ಥಿಗಳು ಆದೇಶ ಸಂಖ್ಯೆ ಸಿಆಸುಇ 06 ಸೆನೆನಿ 2001 ದಿ. 13-2-2001 ರ ರೀತ್ಯಾ ನಮೂನೆ 1 ಮತ್ತು 2 ರಲ್ಲಿ ನಿಗಧಿತ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

8 ಮಾಜಿ ಸೈನಿಕ ಹಾಗೂ ಅಂಗವಿಕಲ ಅಭ್ಯರ್ಥಿಗಳು ಸೂಕ್ತ ಅಧಿಕಾರಿಗಳು ನೀಡಿರುವ ಪ್ರಮಾಣ ಪತ್ರ ಸಲ್ಲಿಸತಕ್ಕದ್ದು.

9 ಯೋಜನೆಗಳಿಂದ ನಿರಾಶ್ರಿತರಾದ ಅಭ್ಯರ್ಥಿಗಳು ಸರ್ಕಾರಿ ಆದೇಶ ಸಂಖ್ಯೆ ಸಿಆಸುಇ 44 ಸೆನೆನಿ 2001 ದಿನಾಂಕ 27-7-2001ರ ಪ್ರಕಾರ ನಿಗದಿತ ಪ್ರಮಾಣ ಪತ್ರ ಸಲ್ಲಿಸಬೇಕು.

10 ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗಾಗಿ ಮೀಸಲಾಗಿರುವ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಅವರು ಅಧ್ಯಯನ ಮಾಡಿದ ಶಾಲೆಯ ಮುಖ್ಯೋಪಾಧ್ಯಾಯರಿಂದ ಪ್ರಮಾಣ ಪತ್ರ ಪಡೆದು ಅದರ ಧೃಡೀಕ್ರತ ಪ್ರತಿಯನ್ನು ಮಾತ್ರ ಲಗತ್ತಿಸತಕ್ಕದ್ದು

[**ವಿಶೇಷ ಸೂಚನೆ :-** ದಿನಾಂಕ **4-3-2002** ರಿಂದ ಕರ್ನಾಟಕ ನಾಗರೀಕ ಸೇವೆಗಳು (ಸ್ಪರ್ಧಾತ್ಮಕ ಪರೀಕ್ಷೆಯಿಂದ ನೇಮಕಾತಿ) (ಸಾಮಾನ್ಯ) , **2001** ನಿಯಮಾವಳಿಯು ಜಾರಿಗೆ ಬಂದಿರುವ ಪ್ರಯುಕ್ತ ಹಾಗೂ ಕರ್ನಾಟಕ ಉಚ್ಛ ನ್ಯಾಯಾಲಯದ ಪತ್ರ ಸಂಖ್ಯೆ ಎಲ್‌ಸಿಎ **98/ 02**, ದಿನಾಂಕ : **8.4.2003** ರ ನಿರ್ದೇಶನದ ಮೇರೆಗೆ ಜವಾನರು, ಕ್ಲೀನರ್ಸ್ ಮತ್ತು ಸ್ಕಾವಿಂಜರ್ಸ್ ಹುದ್ದೆಗಳ ನೇಮಕಾತಿಗಾಗಿ ಈ ಕಛೇರಿಯಿಂದ ಹೊರಡಿಸಿದ್ದ ಕೆಳಕಂಡ ನೇಮಕಾತಿ ಪ್ರಕಟಣೆಗಳನ್ನು ರದ್ದು ಪಡಿಸಲಾಗಿದೆ.

(1) ಆರ್.ಪಿ.ಎಸ್. (ಸಿಸಿಸಿ) **244 /2000** ದಿನಾಂಕ **21-2-2000** (2) ಎಡಿಎಂ **1**(ಎ) **128 /2002** ದಿನಾಂಕ **13-2-2002** ಹಾಗೂ (3) ನೇಮಕಾತಿ ಪ್ರಕಟಣೆ ಸಂಖ್ಯೆ ಎಡಿಎಂ **1** (ಎ) **19** (ಎ) **376/2002** ದಿನಾಂಕ **31-5-2002.**]

ಪ್ರಧಾನ ನಗರ ಸಿವಿಲ್ ಮತ್ತು ಸತ್ರನ್ಯಾಯಾಧೀಶರ ಆದೇಶದ ಮೇರೆಗೆ,

19/5/03

ವಿಲೇಖನಾಧಿಕಾರಿಗಳು,

ನಗರ ಸಿವಿಲ್ ನ್ಯಾಯಾಲಯ, ಬೆಂಗಳೂರು